ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2017-18ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿನ ಸ್ನಾತಕೋತ್ತರ ವಿಸ್ತರಣಾ ಕೇಂದ್ರಗಳಲ್ಲಿನ ಸ್ನಾತಕ ಪದವಿಗಳಾದ ಎಂ.ಬಿ.ಎ/ಎಂ.ಸಿ.ಎ/ಎಂ.ಇ/ಎಂ.ಟೆಕ್ ಕೋರ್ಸುಗಳಿಗೆ ಸೀಟು ಹಂಚಿಕೆ, ಶುಲ್ಕ ನಿಗದಿ ಕುರಿತು.

ಓದಲಾಗಿದೆ:-

1) ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಟಿಇಸಿ 2015 ದಿನಾಂಕ: 26-05-2016.
2) ಉಪಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ರವರ ಪತ್ರ ಸಂಖ್ಯೆ:ವಿಟಿಯು/ವಿಸಿಎಸ್/2016-17/708, ದಿನಾಂಕ:16-06-2016.

ಪ್ರ ಸ್ತಾ ವ ನೆ:-

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿಗಳಾದ ಎಂ.ಬಿ.ಎ/ಎಂ.ಸಿ.ಎ/ಎಂ.ಇ/ಎಂ.ಟೆಕ್ ಕೋರ್ಸುಗಳ ಪ್ರವೇಶ ಪ್ರಕ್ರಿಯೆಯ ನಿರ್ವಹಣೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ. ಸೀಟು ಹಂಚಿಕೆ, ಶುಲ್ಕ ನಿಗಧಿ ಮತ್ತು ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಗಳಿಗೆ ಅನುಸರಿಸಲಾಗುವ ವಿಧಿವಿಧಾನಗಳ ಬಗ್ಗೆ ಈ ಆದೇಶದಲ್ಲಿ ತಿಳಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ ಇವರು, ವಿಶ್ವವಿದ್ಯಾಲಯದ ವತಿಯಿಂದ ಪ್ರಾರಂಭಿಸಿರುವ ಸ್ನಾತಕೋತ್ತರ ವಿಸ್ತರಣಾ ಕೇಂದ್ರಗಳು (PG Centres) ಸ್ವಯಂ ಆರ್ಥಿಕ ಸೌಲಭ್ಯದಿಂದ ನಡೆಸಲ್ಪಡುವ ವಿಸ್ತರಣಾ ಕೇಂದ್ರಗಳಾಗಿದ್ದು, ಇಲ್ಲಿ ನಡೆಸಲ್ಪಡುವ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಇರುವುದಿಲ್ಲವೆಂದು ಮತ್ತು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದಲೇ ವೇತನವನ್ನು ಪಾವತಿಸಬೇಕಿರುವುದರಿಂದ, ಈ ವಿಸ್ತರಣಾ ಕೇಂದ್ರಗಳನ್ನು ನಡೆಸಲು ವಿಶ್ವವಿದ್ಯಾಲಯವು ಸಂಪನ್ಮೂಲದ ಕೊರತೆಯನ್ನು ಎದುರಿಸುತ್ತಿವ ಕಾರಣ, ಇಲ್ಲಿನ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2010-11ನೇ ಸಾಲಿನಲ್ಲಿ ವಿಧಿಸಲಾಗುತ್ತಿದ್ದ ಬೋಧನಾ ಶುಲ್ಕವನ್ನೆ ಮರುನಿಗಧಿಪಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇದರ ವತಿಯಿಂದ ನಡೆಸುತ್ತಿರುವ ಸ್ನಾತಕೋತ್ತರ ವಿಸ್ತರಣಾ ಕೇಂದ್ರಗಳಲ್ಲಿನ ಕಾರ್ಯಕ್ರಮಗಳಿಗೆ ಮತ್ತು ಇಲ್ಲಿನ ಸಂಪನ್ಮೂಲ ವ್ಯಕ್ತಿಗಳ ವೇತನ ಪಾವತಿಗೆ ಸರ್ಕಾರದ ವತಿಯಿಂದ ಯಾವುದೇ ಆರ್ಥಿಕ ನೆರವು ಇಲ್ಲದಿರುವುದರಿಂದ, ಸದರಿ ಕೇಂದ್ರಗಳಲ್ಲಿ ನಡೆಸಲ್ಪಡುವ ಸ್ನಾತಕೋತ್ತರ ಪದವಿ ಕೋರ್ಸಿನ ಭೋಧನಾ ಶುಲ್ಕವನ್ನು ಈ ಹಿಂದೆ ಇದ್ದಂತೆಯೇ ಮರುಸ್ಥಾಪಿಸಲು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಟಿಇಸಿ 2015.**
**ಬೆಂಗಳೂರು, ದಿನಾಂಕ:04ನೇ ಏಪ್ರಿಲ್ 2017.**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇದರ ವತಿಯಂದ ನಡೆಸುತ್ತಿರುವ ಸ್ನಾತಕೋತ್ತರ ವಿಸ್ತರಣಾ ಕೇಂದ್ರಗಳಲ್ಲಿ ಮತ್ತು ಯು ಬಿ ಡಿ ಟಿ ಸಿ ಇ. ದಾವಣಗೆರೆಯಲ್ಲಿ ನಡೆಸುತ್ತಿರುವ

ಸ್ನಾತಕೋತ್ತರ ಪದವಿ ಕೋರ್ಸುಗಳಾದ ಎಂ.ಬಿ.ಎ/ಎಂ.ಸಿ.ಎ./ಎಂ.ಇ./ಎಂ.ಟೆಕ್. ಕೋರ್ಸುಗಳ ಬೋಧನಾ ಶುಲ್ಕ ನಿಗಧಿ ರಚನೆ ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಿದೆ. ಇದು 2017-18 ನೇ ಶೈಕ್ಷಣಿಕ ಸಾಲಿನಿಂದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

| ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇದರ ವತಿಯಿಂದ ನಡೆಸುತ್ತಿರುವ ಸ್ನಾತಕೋತ್ತರ ವಿಸ್ತರಣಾ ಕೇಂದ್ರಗಳಲ್ಲಿನ ಸ್ನಾತಕೋತ್ತರ ಪದವಿ ಕೋರ್ಸುಗಳಾದ ಎಂ.ಬಿ.ಎ/ಎಂ.ಸಿ.ಎ./ಎಂ.ಇ./ಎಂ.ಟೆಕ್. ಕೋರ್ಸುಗಳ ಬೋಧನಾ ಶುಲ್ಕ | | | |
|---|---|---|---|
| ಕ್ರ. ಸಂ. | ಸ್ನಾತಕೋತ್ತರ ಪದವಿ / ಕೋರ್ಸಿನ ಹೆಸರು | ವಾರ್ಷಿಕ ಬೋಧನಾ ಶುಲ್ಕ | ಸೀಟುಗಳ ಸಂಖ್ಯೆ (Intake) |
| 1 | MBA / MCA | Rs. 50,000-00 | ಪ್ರತಿ ಕೇಂದ್ರಕ್ಕೆ 120 |
| 2 | M.Tech (Full Time) | Rs. 60,000-00 | ಪ್ರತಿ ಪ್ರೋಗ್ರಾಮಿಗೆ 25 |
| 3 | M.Tech (Part Time) | Rs.40,000-00 | ಪ್ರತಿ ಪ್ರೋಗ್ರಾಮಿಗೆ 25 |

ಮುಂದುವರೆದು, ಸ್ನಾತಕೋತ್ತರ ಪದವಿ ಕೋರ್ಸುಗಳ ಸೀಟು ಹಂಚಿಕೆ/ಪ್ರವೇಶ ಪ್ರಕ್ರಿಯೆ ಇತ್ಯಾದಿಗಳ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಸ್.ವೆಂಕಟೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ ವಿಶೇಷ ರಾಜ್ಯಪತ್ರದ 200 ಪ್ರತಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರ ಕಚೇರಿಗೆ ಕಳುಹಿಸಿಕೊಡುವಂತೆ ಕೋರಿದೆ.

ಪ್ರತಿ:

1) ರಿಜಿಸ್ಟ್ರಾರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, 'ಜ್ಞಾನ ಸಂಗಮ', ಬೆಳಗಾವಿ.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4) ಕಾರ್ಯದರ್ಶಿಗಳು, ಕಾಮೆಡ್-ಕೆ, #132, 2ನೇ ಮಹಡಿ, 11ನೇ ಮೇನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560055.
5) ಕಾರ್ಯದರ್ಶಿಗಳು, ಕರ್ನಾಟಕ ಪ್ರೈವೇಟ್ ಸ್ನಾತಕೋತ್ತರ ಕಾಲೇಜುಗಳ ಸಂಘ, ಶೇಷಾದ್ರಿಪುರಂ, ಬೆಂಗಳೂರು.
6) ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
8) ಸರ್ಕಾರದ ಉಪ ಕಾರ್ಯದರ್ಶಿಗಳು (ವಿಶ್ವವಿದ್ಯಾಲಯಗಳು), ಉನ್ನತ ಶಿಕ್ಷಣ ಇಲಾಖೆ.
9) ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ / ಒಡಿಜಿಸಿ